# ಪ್ರೆಸ್ ನೋಟ್

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ರಾಜಕಾರಣದಲ್ಲಿ ಮೌಲ್ಯಗಳ ಸಂಪೂರ್ಣ ನಾಶವನ್ನು ನಾವೆಲ್ಲ ಕಂಡಿದ್ದೇವೆ. ಅಧಿಕಾರಲಾಲಸೆ, ಹಣ, ಜಾತಿ ಮತ್ತು ಕೋಮು ಉನ್ಮಾದಗಳು ಚುನಾವಣಾ ರಾಜಕಾರಣದ ಮುಖ್ಯ ಭಾಗಗಳಾಗಿ ಹೋಗಿವೆ. ಬೆಂಗಳೂರು ನಗರವಂತೂ ರಿಯಲ್ ಎಸ್ಟೇಟ್ ಮತ್ತು ಗಣಿ ದೊರೆಗಳ ಒಡ್ಡೋಲಗವಾಗಿ ಹೋಗಿದೆ.

ಇಂತಹ ಪರಿಸ್ಥಿತಿಯಲ್ಲಿ, ಯಾವ ಅಭ್ಯರ್ಥಿ ಹತ್ತಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿರುವನೊ ಅವನು ಮಾತ್ರ ಬರಲಿರುವ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲಿದ್ದಾನೆ. ಮತದಾರರಿಗೆ ಉಡುಗೊರೆಗಳನ್ನು ಕೊಟ್ಟರೆ ಮಾತ್ರ, ಕೀಳು ಮಟ್ಟದ ಜಾತಿ ಮತ್ತು ಕೋಮು ಭಾವನೆಗಳನ್ನು ಉದ್ದೀಪಿಸಿದರೆ ಮಾತ್ರ, ಅಂತಿಮವಾಗಿ ನಮ್ಮನ್ನೆಲ್ಲ ಒಡೆದರೆ ಮಾತ್ರ ಅವನು ಗೆಲ್ಲಲಿದ್ದಾನೆ. ಅವನು ಚುನಾಯಿತನಾಗಲು ಇನ್ಯಾವುದೆ ಒಳ್ಳೆಯ ಕಾರಣಗಳು ಪರಿಗಣಿತವಾಗುವುದಿಲ್ಲ. ಈಗ ರೂಪುಗೊಳ್ಳುತ್ತಿರುವ ತಲೆಮಾರಿನ ಮತ್ತು ನಮ್ಮ ಈ ಸಮಕಾಲೀನ ಸಂದರ್ಭದ ಸವಾಲುಗಳನ್ನು ಅರಿಯದ ಜನರೆ ಚುನಾಯಿತರಾಗುವಂತೆ ತೋರುತ್ತಿದೆ.

ಇವರು ಖರ್ಚು ಮಾಡಲಿರುವ ಪ್ರತಿಯೊಂದು ರೂಪಾಯಿಯೂ ಅನೈತಿಕವಾಗಿ ಸಂಪಾದಿಸಿದ, ಕಳ್ಳಮಾರ್ಗಗಳಿಂದ ಮಾಡಿದ, ಯಾವುದೆ ಲೆಕ್ಕಪತ್ರಗಳಿಲ್ಲದ, ಕಪ್ಪುಹಣ. ದುಡ್ಡಿರುವ ಜನ ಈ ಚುನಾವಣೆಯನ್ನು ಖರೀದಿಸಲಿದ್ದಾರೆ. ಪ್ರತಿಯೊಂದು ರಾಜಕೀಯ ಪಕ್ಷವೂ ನೆಲದ ಕಾನೂನನ್ನು ಮತ್ತು ಜನಮತವನ್ನು ಉಲ್ಲಂಘಿಸಲಿದೆ ಮತ್ತು ಅಣಕಿಸಲಿದೆ.

ಭಾರತ ದೇಶದ ಚುನಾವಣಾ ಆಯೋಗವು ವಿಧಾನಸಭಾ ಚುನಾವಣೆಯ ವೆಚ್ಚವೆಂದು ಪ್ರತಿ ಅಭ್ಯರ್ಥಿಗೆ 10 ಲಕ್ಷ ರೂಪಾಯಿಗಳ ಗರಿಷ್ಠ ಮಿತಿಯನ್ನು ವಿಧಿಸಿದೆ. ಅದರೆ, ಬಹುಪಾಲು ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಅದರ ಹತ್ತರಷ್ಟನ್ನು ಖರ್ಚು ಮಾಡಲಿದ್ದಾರೆ. ಮತ್ತು ಬೆಂಗಳೂರಿನಲ್ಲಂತೂ ಕೆಲವು ಅಭ್ಯರ್ಥಿಗಳು ಆ ಕಾನೂನು ಮಿತಿಯ ನೂರು ಪಟ್ಟಿಗಿಂತಲೂ ಹೆಚ್ಚಿನ ಹಣವನ್ನು ಖರ್ಚು ಮಾಡಲಿದ್ದಾರೆ. ಅನೈತಿಕವಾಗಿ ಮಾಡಿದ, ಲೆಕ್ಕಾಜಮಾ ಇಲ್ಲದ, ಕಪ್ಪುಹಣವನ್ನೆ ಇವರು ಖರ್ಚು ಮಾಡಲಿದ್ದಾರೆ ಮತ್ತು ಇನ್ನೂ ಹೆಚ್ಚಿಗೆ ಅದೇ ತರಹದ ಕೆಟ್ಟಹಣವನ್ನು ಸಂಪಾದಿಸುವ ಉದ್ದೇಶವನ್ನೆ ಇವರು ಹೊಂದಿದ್ದಾರೆ. ಇದು ನ್ಯಾಯಯುತವಾದ ಚುನಾವಣೆಯಲ್ಲ. ಈ ವ್ಯವಸ್ಥೆಯಲ್ಲಿ, ಈ ಸಂದರ್ಭದಲ್ಲಿ, ಯಾವೊಬ್ಬ ಪ್ರಾಮಾಣಿಕ ಮನುಷ್ಯನೂ ಚುನಾವಣೆಗೆ ನಿಂತು ಗೆಲ್ಲಲಾರ.

ಈ ಸಂದರ್ಭದಲ್ಲಿ, ಭಾರತದ ನಾಗರಿಕರಾಗಿ, ನಮ್ಮ ಜವಾಬ್ದಾರಿಗಳು ತಾನೆ ಏನು? ಸುಮ್ಮನೆ ಇದು ನನಗೆ ಸಂಬಂಧಿಸಿದ್ದಲ್ಲ ಎಂದು ಇದ್ದುಬಿಡಲು ಸಾಧ್ಯವೆ? ಇದೊಂದು ಕೇವಲ ರಾಜಕೀಯ ಮನರಂಜನೆ ಎಂದುಕೊಂಡು ನಿಜಕ್ಕೂ ಆಗುತ್ತಿರುವ ಈ ಅತ್ಯಾಚಾರವನ್ನು ಸಂತೋಷದಿಂದ ಸ್ವೀಕರಿಸಿಬಿಡುವುದು ತರವೆ? ಕಳ್ಳರು, ಸುಳ್ಳರು, ಕ್ರಿಮಿನಲ್‌ಗಳು, ಸಮಾಜಘಾತುಕ ಶಕ್ತಿಗಳು, ಸಣ್ಣಮನಸ್ಸಿನ ಜನರೂ ನಮ್ಮ ಪ್ರತಿನಿಧಿಗಳಾಗುವುದನ್ನು ನಾವು ಭರಿಸಲು ಸಾಧ್ಯವೆ? ಈ ತರಹದ ಜನರನ್ನು ನಮ್ಮ ಮಕ್ಕಳಿಗೂ ನಾಯಕರನ್ನಾಗಿ ಕೊಡುವ ಮೂಲಕ ನಾವು ನಮ್ಮ ಮಕ್ಕಳಿಗೆ ಪಾಪವನ್ನೂ, ದ್ರೋಹವನ್ನೂ ಮಾಡುತ್ತಿಲ್ಲವೆ? ಈ ಸವಾಲಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ? ಕೇವಲ 'ಬಾಯಿಪಚಾರದ' ಮಾತುಗಳನ್ನು ಹೇಳುವ ಮೂಲಕವೆ? ಕೇವಲ ಸಿನಿಕರಾಗಿ, ಸ್ವಾರ್ಥಿಗಳಾಗಿ ಇದ್ದುಬಿಡುವುದರ ಮೂಲಕವೆ? ಅಥವಾ ನಮ್ಮ ಹಕ್ಕುಗಳನ್ನು ಮತ್ತು ಜವಾಬ್ದಾರಿಗಳನ್ನು ತಿಳಿದುಕೊಂಡು, ಧರ್ಮಯುತವಾದ, ಪ್ರಜಾಪ್ರಭುತ್ವಕ್ಕೆ ತಕ್ಕನಾದ ಹಾದಿಯನ್ನು ತುಳಿಯುವುದರ ಮೂಲಕವೆ?

ಹಾಗಾಗಿ, ಈಗ ನಾವು ಸುಮ್ಮನೆ, ಸಂಬಂಧವಿಲ್ಲದ ರೀತಿಯಲ್ಲಿ ಇದ್ದುಬಿಡಲು ಸಾಧ್ಯವಿಲ್ಲ ಎಂದು ನಾನು ಖಚಿತವಾಗಿ ಭಾವಿಸುತ್ತೇನೆ. ಈಗ ನಾವು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೆ ಹೋದರೆ ಅದು ಬಹುದೊಡ್ಡ ಪಾಪಕಾರ್ಯ ಮತ್ತು ಅದು ನಾವು ಹುಟ್ಟಿ ಬೆಳೆದ, ನಾವು ದುಡಿದು ಜೀವನ ಸಾಗಿಸುತ್ತಿರುವ, ತೆರಿಗೆ ಕಟ್ಟುತ್ತಿರುವ, ನಮ್ಮ ಮಕ್ಕಳು ಬೆಳೆಯುತ್ತಿರುವ ಮತ್ತು ಅವರು ತಮ್ಮ ಜೀವನವನ್ನು ಕಳೆಯಲಿರುವ ಬೆಂಗಳೂರು ಮತ್ತು ಕರ್ನಾಟಕಕ್ಕೆ ಎಸಗುವ ದ್ರೋಹ ಎಂದು ನಾನು ಭಾವಿಸುತ್ತೇನೆ.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವದ ಅಡಿಗಲ್ಲುಗಳೆ ಕದಲುತ್ತಿರುವ ಈ ಸಮಯದಲ್ಲಿ ಕರ್ನಾಟಕದ ಪ್ರಜ್ಞಾವಂತ ಜನತೆ ಸಕ್ರಿಯವಾಗಿ ಈಗಲೆ ಮಧ್ಯಪ್ರವೇಶಿಸದಿದ್ದರೆ ನಮ್ಮ ಮುಂದಿನ ದಿನಗಳು ಕರಾಳವಾಗಲಿವೆ. 1947 ರಲ್ಲಿ ದೇಶ ಕಟ್ಟಿಕೊಂಡ ಮಹಾಕನಸು ಧೂಳಿಪಟವಾಗಲಿದೆ.

ಇದಕ್ಕೆ ಉತ್ತರವಾಗಿ, ನೈತಿಕ ಪ್ರತಿಭಟನೆಯಾಗಿ, ಮೌಲಿಕ ಪರ್ಯಾಯ ರಾಜಕಾರಣದ ಉದಾಹರಣೆಯಾಗಿ, ಬೆಂಗಳೂರಿನ ಒಂದು ವಿಧಾನಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲು ನಿರ್ಧರಿಸಿ, ಈಗಾಗಲೇ ಜಯನಗರ ವಿಧಾನಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದ್ದೇನೆ.

ರಾಜಕಾರಣದಲ್ಲಿ ಹೊಸತರಹದ ಸಂವಾದವನ್ನು ಆರಂಭಿಸುವ ನಿಟ್ಟಿನಲ್ಲಿನ ಒಂದು ಪ್ರಯತ್ನ ನನ್ನ ಈ ಉಮೇದುವಾರಿಕೆ. ಯಾವುದೆ ತರಹದ ಉದ್ಯಮ, ಜಾತಿ, ಕೋಮು ಮುಂತಾದವುಗಳ ಪ್ರಭಾವಕ್ಕೆ ಒಳಗಾಗದೆ, ಕರ್ನಾಟಕದ ಜನತೆಯನ್ನು ಪ್ರತಿನಿಧಿಸಲು ಯೋಗ್ಯವಾದ, ಕರ್ನಾಟಕದ ಶಾಸನಸಭೆಯಲ್ಲಿ ಚರ್ಚಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಯ ಯೋಜನೆಗಳನ್ನು ರೂಪಿಸಲು ಅಗತ್ಯವಾದ ಅರ್ಹತೆಗೆ ನನ್ನ ಜೀವನಾನುಭವಗಳು ನನ್ನನ್ನು ಸಿದ್ಧಪಡಿಸಿವೆ ಎಂದು ನಂಬಿದ್ದೇನೆ.

ಈ ಚುನಾವಣೆಗೆ ಬೇಕಾಗುವ ಪೂರಾ ಹಣವನ್ನು ಸಾರ್ವಜನಿಕರಿಂದಲೆ ದೇಣಿಗೆ ಸಂಗ್ರಹಿಸಲು ತೀರ್ಮಾನಿಸಿದ್ದೇನೆ. ಚುನಾವಣೆಗೆಂದು ಗರಿಷ್ಠ ಮಿತಿಯಾದ 10 ಲಕ್ಷವನ್ನಷ್ಟೆ ವೆಚ್ಚ ಮಾಡಲಿದ್ದೇನೆ. ಇದಕ್ಕಿಂತ ಹೆಚ್ಚಿನ ಹಣವನ್ನು ನಾವು ಸಂಗ್ರಹಿಸಲು ಸಾಧ್ಯವಾದರೆ ಅದನ್ನು ಕರ್ನಾಟಕದಾದ್ಯಂತ ಮೌಲ್ಯ ವ್ಯವಸ್ಥೆಯನ್ನು ಮತ್ತು ಪ್ರಜಾಪ್ರಭುತ್ವವನ್ನು ಬಲಗೊಳ್ಳಿಸಲು ಬಳಸಲಿದ್ದೇವೆ. ಪ್ರತಿ ದೇಣಿಗೆಯನ್ನೂ ವೆಬ್‌ಸೈಟಿನಲ್ಲಿ ಪ್ರಕಟಿಸಲಿದ್ದೇನೆ. ಪ್ರತಿಯೊಂದು ಪೈಸೆಗೂ ಲೆಕ್ಕ ಇರಲಿದೆ ಮತ್ತು ಪ್ರತಿ ಪೈಸೆಯೂ ಜವಾಬ್ದಾರಿಯಿಂದ ಮೌಲಿಕವಾಗಿ ಖರ್ಚು ಮಾಡಲ್ಪಡುತ್ತದೆ.

ಈ ನಿಟ್ಟಿನಲ್ಲಿನ ನನ್ನ ಪಯಣ ಏಪ್ರಿಲ್ 14, 2008 ರಂದು ಇಂತಹ ಸದಾಶಯಗಳನ್ನು ಬೆಂಬಲಿಸುವ ಕನ್ನಡದ ಹಲವು ಹಿರಿಯ ಪ್ರಜ್ಞಾವಂತ ಚಿಂತಕರೊಡನೆ ಸಂವಾದದಲ್ಲಿ ಪಾಲ್ಗೊಂಡು, ನಂತರ ವಿಧಾನಸೌಧದ ಮುಂದೆ ಇರುವ ಭಾರತದ ಸಂವಿಧಾನದ ಶಿಲ್ಪಿಯಾದ ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಗೌರವ ಸಲ್ಲಿಸುವುದರ ಮೂಲಕ ಆರಂಭವಾಗಿ ಈಗ ನಾಮಪತ್ರವನ್ನೂ ಸಲ್ಲಿಸಿಯಾಗಿದೆ.

ಇದಕ್ಕೆ ಇನ್ನೂ ಹೆಚ್ಚಿನ ತಾತ್ವಿಕ ನೆಲೆಗಟ್ಟು ಮತ್ತು ಗಂಭೀರತೆಯನ್ನು ತರಲು ಏಪ್ರಿಲ್ 26ರಿಮದ 28ರ ತನಕ, ಸಾರ್ವಜನಿಕ ಬದುಕಿನಲ್ಲಿ ಸಂಪೂರ್ಣ ಮೌಲ್ಯಗಳನ್ನು ಆಗ್ರಹಿಸಿ, "ಮೌಲ್ಯಾಗ್ರಹ"ದ ಹೆಸರಿನಲ್ಲಿ ಮೂರು ದಿನಗಳ ಉಪವಾಸ ಸತ್ಯಾಗ್ರಹವನ್ನು ಮಾಡಲಿದ್ದೇನೆ. "ನ್ಯಾಯಬದ್ಧ ಪ್ರಜಾಪ್ರಭುತ್ವ"ದಲ್ಲಿ ನಂಬಿಕೆಯಿರುವ ಮತ್ತು "ರಾಜಕಾರಣದಲ್ಲಿ ಮೌಲ್ಯ ಮತ್ತು ನೀತಿಗಳನ್ನು" ಬಯಸುವ ಸಮಾನಮನಸ್ಕರನ್ನು ಈ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಈ ಮೂಲಕ ಆಹ್ವಾನಿಸುತ್ತಿದ್ದೇನೆ.

**ಸ್ಥಳ:** ಮಹಾತ್ಮ ಗಾಂಧಿ ಪ್ರತಿಮೆ ಎದುರು, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು
**ದಿನಾಂಕ:** ಶನಿವಾರ, ಏಪ್ರಿಲ್ 26ರಿಂದ ಸೋಮವಾರ ಏಪ್ರಿಲ್ 28ರವರೆಗೆ

**ನನ್ನ ಕಿರು ಪರಿಚಯ:**

ನನ್ನ ಹೆಸರು ರವಿ ಕೃಷ್ಣಾ ರೆಡ್ಡಿ. 33 ವರ್ಷ ವಯಸ್ಸು. ನಾನು ಬೊಮ್ಮಸಂದ್ರ ಎಂಬ ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಹಳ್ಳಿಯವನು. ನನ್ನ ಪ್ರಾಥಮಿಕ ಶಿಕ್ಷಣವನ್ನು ನಮ್ಮ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ, ಕನ್ನಡ ಮಾಧ್ಯಮದಲ್ಲಿ ಮಾಡಿದೆ. ನಂತರದ ದಿನಗಳಲ್ಲಿ ಬೆಂಗಳೂರಿನ ಯುವಿಸಿಇ ಇಂದ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್‌ನಲ್ಲಿ ಬಿಇ ಮತ್ತು ಎಂಇ ಮಾಡಿದೆ. ಕಳೆದ 6 ವರ್ಷಗಳಿಂದ ಅಮೆರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಬೆಂಗಳೂರಿನಿಂದ ದೂರ ಇದ್ದರೂ, ಭಾರತದಲ್ಲಿ, ಅದರಲ್ಲೂ ಪ್ರಮುಖವಾಗಿ ಕರ್ನಾಟಕದಲ್ಲಿ ನಾವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮತ್ತು ಪ್ರಗತಿಪರ ವಿಷಯಗಳ ಬಗ್ಗೆ ಕನ್ನಡದಲ್ಲಿ ಬರೆಯುತ್ತ, ಚರ್ಚಿಸುತ್ತ ಬಂದಿದ್ದೇನೆ. 2006 ರಲ್ಲಿ "ವಿಕ್ರಾಂತ ಕರ್ನಾಟಕ" ಎಂಬ ಕನ್ನಡ ವಾರಪತ್ರಿಕೆಯನ್ನೂ ಆರಂಭಿಸಿದೆ. ನನ್ನ ನಿಲುವು, ಕಾಳಜಿ, ಆಶಯ, ಆದರ್ಶಗಳನ್ನು ನನ್ನ ಲೇಖನಗಳು ಪ್ರತಿಬಿಂಬಿಸುತ್ತವೆ ಎನ್ನುವ ನಂಬಿಕೆ ನನ್ನದು.

ಈ ನಿಟ್ಟಿನಲ್ಲಿ ಈ ನನ್ನ ಆಶಯಗಳು ಕರ್ನಾಟಕದ ಪ್ರಜ್ಞಾವಂತ ದೇಶಪ್ರೇಮಿ ನಾಗರಿಕರವೂ ಆಗಿವೆ ಎಂದು ಭಾವಿಸುತ್ತ, ಅದಕ್ಕೆ ಅವರೆಲ್ಲರ ಪೂರ್ಣ ಸಹಕಾರ, ಬೆಂಬಲ, ಪ್ರೋತ್ಸಾಹದ ಜೊತೆಗೆ ತನು-ಮನ-ಧನದ ಸಹಾಯ ನೀಡಬೇಕೆಂದು ಕೋರುತ್ತೇನೆ.

ಈ ಆಶಯಗಳಿಗೆ ಬೆಂಬಲಿಸಿದವರ ಪಟ್ಟಿ ಇಂತಿದೆ:
**ಯು.ಆರ್.ಅನಂತಮೂರ್ತಿ**
**ದೇವನೂರ ಮಹಾದೇವ**
**ಕಾಳೇಗೌಡ ನಾಗವಾರ**
**ಕೆ.ಮರುಳಸಿದ್ದಪ್ಪ**
**ಅಗ್ರಹಾರ ಕೃಷ್ಣಮೂರ್ತಿ**
**ಆರ್.ಪಿ.ವೆಂಕಟೇಶಮೂರ್ತಿ**
**ಶೂದ್ರ ಶ್ರೀನಿವಾಸ್**
**ನಾಗೇಶ ಹೆಗಡೆ**
**ನಟರಾಜ ಹುಳಿಯಾರ್**
**ವಿನಯಾ ವಕ್ಕುಂದ**
**ಬಂಜಗೆರೆ ಜಯಪ್ರಕಾಶ್**
**ಎಚ್.ನಾಗವೇಣಿ**
**ಸುಕನ್ಯಾ ಕನಾರಳ್ಳಿ**
**ನಾಗತಿಹಳ್ಳಿ ಚಂದ್ರಶೇಖರ್**
**ಶ್ರೀನಿವಾಸ್ ಜಿ.ಕಪ್ಪಣ್ಣ**
**ಮತ್ತು ಹಲವರು...**

ಇಂತಿ ತಮ್ಮ ವಿಶ್ವಾಸಿ,
**ರವಿ ಕೃಷ್ಣಾ ರೆಡ್ಡಿ**
ನಂ. 705, 13ನೇ ಕ್ರಾಸ್, 32ನೇ ಮೇನ್
ಜೆಪಿ ನಗರ ಮೊದಲ ಹಂತ, ಬೆಂಗಳೂರು- 78
e-mail: ravikreddy@yahoo.com
Phone: 9341735754